ತಾರೀಖು 19ನೇ ಆಗಸ್ಟ್ 1884.

ನಂ. 124.—ಈಡೂರು ಡಿಸ್ಟ್ರಿಕ್ಟ್ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ನಾಗೇಶರಾಯರಿಗೆ ಅವರು ಉಪಯೋಗಿಸಿಕೊಂಡ ತಾರೀಖು ಲಾಗಾಯತು ವಂದು ವಾರದ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 125.—ನಾಲ್ಕನೇ ಕ್ಲಾಸ್ ಅಮಲ್ದಾರ್ ವೆಂಕಟರಾಯರು, ಮೂಡಗೆರೆ ತಾಲ್ಲೂಕಿನ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಕೆಲಸಕ್ಕೆ ವರ್ಗ ಮಾಡಲ್ಪಟ್ಟಿರುತ್ತಾರೆ—ಕೂಡ್ಲೆ ಕೆಲಸದ ಮೇಲೆ ಹಾಜರಾಗತಕ್ಕದ್ದು.

ತಾರೀಖು 21ನೇ ಆಗಸ್ಟ್ 1884.

ನಂ. 126.—ಈಚಿಗೆ ಹಾಸನ ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟ ಮಾಜಿ ಆರಕಲ್‌ಗೂಡು ತಾಲ್ಲೂಕಿನ ಕೆಲವು ಚಿಲ್ಲರೇ ಗ್ರಾಮಗಳು ಅವುಗಳ ಬಾಜೂದಲ್ಲಿನ ಗ್ರಾಮಗಳಿಗೆ ಸೇರಿಸಲ್ಪಟ್ಟಿರುವದನ್ನು ತೋರಿಸುವ ಇದರಡೀ ಕಂಡ ತಖ್ತೆಯು ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ.

ನಾಗಣಿ ಹೆಸರು	ನಂಬರು.	ಕಾಯಂಮಾಡಲ್ಪಟ್ಟ ಗ್ರಾಮಗಳು.	ನಂಬರ್	3ನೇ ಕಾಲಂನಲ್ಲಿ ಕಾಣಿಸಿರುವ ಗ್ರಾಮಗಳಲ್ಲಿ ಸೇರಿಸಬೇಕಾದ ಗ್ರಾಮಗಳ ಹೆಸರು.	ಷರಾ.
1	2	3	4	5	6
ಹೊನ್ನಾಳಿ ಸೀಮೆ	1	ರಾಮನಹಳ್ಳಿ	1	ಗುಡಬೊಮ್ಮನಹಳ್ಳಿ	
	2	ಭಕ್ತರವಳ್ಳಿ (ಮಾರವೇ ಫಿರಕಾ)	1	ಮಾಯಿಗೊಂಡನಹಳ್ಳಿ	
	3	ಕೊಡಗಟ್ಟವಳ್ಳಿ			ಭರತ್ತೊರಿಗೆ ಸೇರಿದ ಈ ಎರಡು ದಾಖಲೆ ಗ್ರಾಮಗಳು ಮೂಲೆ ತಾಕಾಗಿರುವದರಿಂದ ಈ ಎರಡೂ ಬೇರೇ ಗ್ರಾಮಗಳಾಗಿರತಕ್ಕದ್ದು, ಆಸಲೀ ಭರತೂರಿಗೆ ಸೇರತಕ್ಕದ್ದಲ್ಲಾ.
	4	ಈಟ್ಟೇ ಹೊಸೂರು			
	5	ಹಂಜಲಿಗೆ	1	ಮೂಲಗೊಂಡನಹಳ್ಳಿ	
	6	ಮಾದಿಹಳ್ಳಿ	1	ಭಕ್ತರವಳ್ಳಿ (ಬೇಚರಾಖ)	
	7	ಚಿಕ್ಕನಹಳ್ಳಿ	1	ಬುಕ್ಕಾಪುರ	
	8	ಅಮಲೆಪುರ	1	ಮಲ್ಲೇನಹಳ್ಳಿ	
ಪಾಳ್ಯ	9	ವಲಗರಹಳ್ಳಿ	1	ಪಾಯಿಂಣನಹಳ್ಳಿ	
ಕಾಟ್ಯ	10	ದೆನಿಹಳ್ಳಿ	1	ಮೊಲ್ಲ ಚಿಕ್ಕನಹಳ್ಳಿ	
	11	ಮಂಚನಹಳ್ಳಿ	1	ಪಡ್ಲು ಚಿಕ್ಕನಹಳ್ಳಿ	

ನಂ. 127.—ಮಾಲೂರು ಜಿಪ್ಪ್ಯೂಟಿ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಗುಲಾಂ ಮೊಹದ್ದೀರು, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 335ನೇ ಸೆಕ್ಷನಿನ ನಿಯಮವನುಸರಿಸಿ, ಫಿರ್ಯಾದಿಗಳ ವ ಸಾಕ್ಷಿಗಾರರ ಸಾಕ್ಷ್ಯತ್ವವನ್ನು ಸ್ವದಸ್ತೂರು ಕನ್ನಡ ಭಾಷೆಯಲ್ಲಿ ತೆಗದುಕೊಳ್ಳುವದಕ್ಕೆ ನಿಯಮಿಸಲ್ಪಟ್ಟಿರುತ್ತಾರೆ.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಟೇರಿ.